ಓ ಎಸ್ ನಂ.42/2024

ಪಿ.ಡಬ್ಲ್ಯೂ-1 ಖಾಜಾ ಹುಸೇನ ತಂದೆ ಮಕ್ತುಮಸಾಬ ಜಮಾದಾರ

**(ಇಂದು ದಿನಾಂಕಃ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲು **:** ೩ ರಿಂದ ೫ನೇ ಪ್ರತಿವಾದಿಗಳ ಪರ ಶ್ರೀ ಎ ಎಸ್ ಜೆ ವಕೀಲರಿಂದ.

ನನಗೆ ಕನ್ನಡ ಮತ್ತು ಇಂಗ್ಲೀಷ್ ಸ್ವಲ್ಪ-ಸ್ವಲ್ಪ ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ವಿಷಯಗಳು ನನಗೆ ಗೊತ್ತು. ಒಟ್ಟು ೨ ದಾವಾ ಆಸ್ತಿಗಳು ಈ ದಾವೆಯಲ್ಲಿ ಇರುತ್ತವೆ. ದಾವಾ ಆಸ್ತಿಗಳ ಸರ್ವೆ ನಂಬರ ೫೬/೨ ಮಾತ್ರ ನನಗೆ ಗೊತ್ತು. ಸರ್ವೆ ನಂಬರ ೫೬/೨ ರ ಚಕ್ಕುಬಂದಿ ನನಗೆ ಈಗ ಹೇಳಲು ಆಗುವುದಿಲ್ಲ. ಗುಡುಸಾಬ ನದಾಫ್ ರವರು ನನ್ನ ಮುತ್ತಾತನಾಗಿದ್ದರಿಂದ ನನಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ. ಗುಡುಸಾಬರವರಿಂದ ಅವರ ಮಕ್ಕಳಾ ಮೌಲಾಸಾಬ ಮತ್ತು ಅಲಿಸಾಬರವರ ಹೆಸರಿನಲ್ಲಿ ದಾವಾ ಆಸ್ತಿಗಳು ಆಗಿದ್ದವು. ಗುಡುಸಾಬರವರು ಯಾವ ವರ್ಷದಂದು ಮೃತರಾಗಿರುತ್ತಾರೆ ಎಂದು ನನಗೆ ಹೇಳಲು ಗೊತ್ತಿಲ್ಲ. ೧೯೭೮ ರ ಮೊದಲು ಮೌಲಾಸಾಬ ಮತ್ತು ಅಲಿಸಾಬರವರ ಹೆಸರಿನಲ್ಲಿ ದಾವಾ ಆಸ್ತಿಗಳ ಪಹಣಿ ಇದ್ದವು.

೨. ೨೦೦೨ ರ ನಂತರ ಅಲಿಸಾಬರವರ ಹೆಸರು ದಾಖಲಾಗಿರುತ್ತದೆ. ಅವರ ಜೊತೆಗೆ ನನ್ನ ಅಜ್ಜಿ ರೋಷನ್ ಬಿ ರವರ ಹೆಸರು ಕೂಡಾ ಅವರ ಜೊತೆಗೆ ದಾಖಲಾಗಿರುತ್ತದೆ. ೨೦೧೭ ರಲ್ಲಿ ಅಲಿಸಾಬರವರ ಹೆಸರಿನಲ್ಲ ಮಾತ್ರ ಪಹಣಿ ಇತ್ತು ಎಂದರೆ ಸಾಕ್ಷಿಯು ಕಂಪ್ಯೂಟರ್ ಪಹಣಿ ಆದಾಗ ನನ್ನ ಅಜ್ಜಿಯ ಹೆಸರಿನಲ್ಲಿ ಕೇವಲ ೨೩ ಗುಂಟೆ ಜಮೀನು ಆಗಿದೆ ಉಳಿದ ಜಮೀನು ಅಲಿಸಾಬರವರ ಹೆಸರಿನಲ್ಲಿ ತಪ್ಪಾಗಿ ನಮೂದಾಗಿರುತ್ತದೆ

ಎನ್ನುತ್ತಾರೆ. ಅಲಿಸಾಬರವರ ಹೆಸರಿನಲ್ಲಿ ತಪ್ಪಾಗಿ ಕಂದಾಯ ದಾಖಲೆ ಆದ ಕುರಿತು ನಮಗೆ ಅದು ಗೊತ್ತಾಗದ ಕಾರಣ ಅಪೀಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಅಲಿಸಾಬರವರ ಹೆಸರಿನಲ್ಲ ತಪ್ಪಾಗಿ ಪಹಣಿ ಆಗಿತ್ತು.

೩. ೧ನೇ ಪ್ರತಿವಾದಿ ೪ ಮತ್ತು ೫ನೇ ಪ್ರತಿವಾದಿಗಳಿಗೆ ಜಮೀನು ಮಾರಾಟ ಮಾಡಿದಾಗ ಪಹಣಿ ತಪ್ಪಾಗಿ ಆದ ಕುರಿತು ನಮಗೆ ಗೊತ್ತಿರದ ಕಾರಣ ನಾವು ಯಾವುದೇ ತಕರಾರು ಮಾಡಿರುವುದಿಲ್ಲ. ೩ನೇ ಪ್ರತಿವಾದಿ ೪ ನೇ ಪ್ರತಿವಾದಿಗೆ ೨೦೧೭-೧೮ ರಲ್ಲಿ ಜಮೀನು ಮಾರಾಟ ಮಾಡಿರಬಹುದು. ಸದರಿ ಜಮೀನಿನ ಮುಟೇಷನ್ ಆಗುವ ಕುರಿತು ನಮಗೆ ಮಾಹಿತಿ ಇರಲಿಲ್ಲ ಅದು ನನ್ನ ಅಜ್ಜಿಗೆ ಗೊತ್ತು, ನನಗೆ ಗೊತ್ತಿಲ್ಲ. ೨೦೧೭ ರಿಂದ ೨೦೨೨ ರವರಿಗೆ ನಾವು ಯಾವುದೇ ದಾಖಲೆಗಳನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅದು ಕಾನೂನುಬಾಹಿರವಾಗಿ ಮಾಡಲಾಗಿತ್ತು ಮತ್ತು ಅದರ ಬಗ್ಗೆ ನಮಗೆ ಗೊತ್ತಿರದೆ ಇದ್ದುದರಿಂದ ನಾವು ಪ್ರಶ್ನೆ ಮಾಡಿರುವುದಿಲ್ಲ ಎನ್ನುತ್ತಾರೆ. ೩ ಮತ್ತು ೪ನೇ ಪ್ರತಿವಾದಿಗಳು ೫ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ವಿಚಾರ ನಮಗೆ ಆಗ ಗೊತ್ತಿರದ ಕಾರಣ ನಾವು ಅದನ್ನು ಪ್ರಶ್ನಿಸಿರುವುದಿಲ್ಲ. ೫ನೇ ಪ್ರತಿವಾದಿ ೨೦೨೩ ರಲ್ಲಿ ಖರೀದಿಸಿರುತ್ತಾರೆ.

೪. ೫ನೇ ಪ್ರತಿವಾದಿ ಹೆಸರಿನಲ್ಲಿ ೯ ಗುಂಟೆ ಜಮೀನು ಇರುತ್ತದೆ. ಅದರ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ. ದಾವಾ ಜಮೀನುಗಳು ನಮ್ಮ ಅಜ್ಜಿ ಇರುವವರೆಗೆ ಅವರ ಸ್ವಾಧೀನದಲ್ಲಿ ಇದ್ದವು ಈಗ ಅವರು ಆರೋಗ್ಯ ಸರಿಯಿರದೆ ಹಾಸಿಗೆ ಹಿಡಿದಿದ್ದರಿಂದ ಅವರು ಆರೋಗ್ಯವನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ರೋಷನ್ ಬಿ ರವರು ನನ್ನ ತಾಯಿಯ ತಾಯಿ ಎಂದರೆ ಸರಿ. ೨ನೇ ವಾದಿ ರೋಷನ್ ಬಿ ರವರು ಸಿವಿಲ್ ನ್ಯಾಯಾಲಯದಲ್ಲಿ ಒಂದು ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ೨ನೇ ವಾದಿ

ದಾವಾ ಆಸ್ತಿಗಳು ೧ನೇ ಪ್ರತಿವಾದಿಯ ತಂದೆಯ ಆಸ್ತಿಗಳು ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾದಿ ಅವರ ತಂದೆಗೆ ಒಬ್ಬಳೆ ಮಗಳು ಎಂದರೆ ಸರಿ. ನನ್ನ ಅಜ್ಜಿಯಾದ ೨ನೇ ವಾದಿ ಹಾಕಿದ ದಾವೆಯಲ್ಲಿ ದಾವಾ ಆಸ್ತಿಗಳು ೧ನೇ ಪ್ರತಿವಾದಿಯ ತಂದೆಯ ಆಸ್ತಿಗಳಾಗಿವೆ ಎಂದು ಹೇಳಿ ನನ್ನ ಅಜ್ಜಿ ಹಾಕಿದ ದಾವೆ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ.

೫. ೧ ಮತ್ತು ೨ನೇ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಮಾರಾಟ ಮಾಡುವಾಗ ನೀವು ಖರೀದಿಸುತ್ತಿರಾ ಎಂದು ನಮ್ಮನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಆಸ್ತಿಗಳನ್ನು ನಮಗೆ ಹೇಗೆ ಮಾರಾಟ ಮಾಡುತ್ತಾರೆ ಎನ್ನುತ್ತಾರೆ. ೩ ರಿಂದ ೫ನೇ ಪ್ರತಿವಾದಿಗಳಿಗೆ ಜಮೀನು ಮಾರಾಟ ಮಾಡುವಾಗ ಪಹಣಿಗಳು ೧ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದವು. ನಮ್ಮ ಹತ್ತಿರ ಹಣ ಇಲ್ಲ ನೀವು ಯಾರಿಗಾದರೂ ಮಾರಾಟ ಮಾಡಿ ಎಂದು ೧ ಮತ್ತು ೨ನೇ ಪ್ರತಿವಾದಿಗೆ ಹೇಳಿದ್ದೇವು ಎಂದರೆ ಸರಿಯಲ್ಲ. ೩ ರಿಂದ ೫ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಮತ್ತು ನಮಗೂ ಯಾವುದೇ ಸಂಬಂಧ ಇರದೆ ಇದ್ದರೂ ೩ ರಿಂದ ೫ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ **:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.